**O. S. No:06/2023**
**PW:1**

(ಇಂದು ದಿನಾಂಕಃ **23-04-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್ ಎಂ ಆರ್ ವಕೀಲರಿಂದಃ**

ದಾವಾ ಆಸ್ತಿ ಖುಲ್ಲಾ ನಿವೇಶನ ಆಗಿತ್ತು ಎಂದರೆ ಸರಿ. ಸಾಮಾನ್ಯವಾಗಿ ಕಟ್ಟಡ ನಿರ್ಮಾಣ ಮಾಡಬೇಕಾದರೆ ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆಯಬೇಕಾಗುತ್ತದೆ ಎಂದರೆ ಸರಿ. ನಂತರ ಸದರಿ ಪ್ರಾಧಿಕಾರದವರು ಆಸ್ತಿ ಯಾರ ಹೆಸರಿನಲ್ಲಿದೆ ಎಂದು ಪರಿಶೀಲಿಸಿ ಅನುಮತಿ ನೀಡುತ್ತಾರೆ ಎಂದರೆ ಸರಿ. ಈಗ ದಾವಾ ಆಸ್ತಿಯಲ್ಲಿ ಮನೆ ಹಾಗೂ ಖುಲ್ಲಾ ಜಾಗೆ ಇದೆ ಎಂದರೆ ಸರಿ. ಸದರಿ ಜಾಗೆಯಲ್ಲಿ ಅನುಮತಿ ಪಡೆದುಕೊಂಡು ಮನೆ ನಿರ್ಮಿಸಲಾಗಿದೆ ಎಂದರೆ ಸರಿ. ಮನೆ ಕಟ್ಟುವ ವೇಳೆ ದಾವಾ ಆಸ್ತಿ ನನ್ನ ಸಹೋದರ ರಾಘವೇಂದ್ರ ಉರಣಕರ ರವರ ಹೆಸರಿನಲ್ಲಿತ್ತು ಎಂದರೆ ಸರಿ. ಪುರಸಭೆ ನವಲಗುಂದರವರು 2012 ರಲ್ಲಿ ದಾವಾ ಆಸ್ತಿಯಲ್ಲಿ ಮನೆ ನಿರ್ಮಿಸಲು ಸದರಿ  ರಾಘವೇಂದ್ರ ಉರಣಕರ ರವರಿಗೆ ಅನುಮತಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 03-08-2012 ರಂದು ಸದರಿ ಪುರಸಭೆಯವರು  ರಾಘವೇಂದ್ರ ಉರಣಕರ ರವರಿಗೆ ವಾಸ ಸ್ಥಳ ಪರವಾನಗೆ ಪತ್ರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾಜಪೇಯಿ ಮನೆ ನಿರ್ಮಾಣ ಯೋಜನೆಯಡಿಯಲ್ಲಿ ಎಸ್ ಬಿ ಐ ಬ್ಯಾಂಕ್ ನವರು  ರಾಘವೇಂದ್ರ ಉರಣಕರ ರವರಿಗೆ ಸಾಲ ಮಂಜೂರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾನೇ ಹಣ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು  ರಾಘವೇಂದ್ರ ಉರಣಕರ ರವರಿಗೆ ಎಷ್ಟು ಹಣ ನೀಡಿರುತ್ತೇನೆಂದು ನನಗೆ ನೆನಪಿಲ್ಲ. ಸದರಿ ಮನೆ ನಿರ್ಮಿಸಲು ನಾನೇ ಹಣ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಗೆ ವಿದ್ಯುತ್ ಹಾಗೂ ನೀರಿನ ಸೌಕರ್ಯವಿದೆ ಎಂದರೆ ಸರಿ. ಸದರಿ ವಿದ್ಯುತ್ ಸಂಪರ್ಕ ಹಾಗೂ ನೀರಿನ ಸೌಕರ್ಯ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ.

2. ನನಗೆ ದಾವಾ ಆಸ್ತಿಯಲ್ಲಿ ನನಗೆ ಪ್ರಿಯಂಟಿವ್ ರೈಟ್ ಇರುವುದಿಲ್ಲ ಎಂದರೆ ಸರಿಯಲ್ಲ. ಈಗ ಸದರಿ ಮನೆಯಲ್ಲಿ 6 ನೇ ಪ್ರತಿವಾದಿ, ಆತನ ಸಹೋದರ ಹಾಗೂ ಕುಟುಂಬ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನವಲಗುಂದದ ಪಿ ಡಬ್ಲೂ ಡಿ ಕ್ವಾಟರ್ಸ ನಲ್ಲಿ ವಾಸವಿದ್ದೇನೆ. ಸದರಿ ಕ್ವಾಟರ್ಸ ನಿಂದ ದಾವಾ ಆಸ್ತಿ 400 ಮೀ. ಅಂತರದಲ್ಲಿದೆ. 6 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗೂ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ.  ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

ನವಲಗುಂದ.